# ಪುಸ್ತಕ ಪರಿಚಯ

**೧. ಸೂಕ್ತ ಗೀತಾಂಜಲಿ**

**೨. ವೇದಮಂತ್ರ ಗೀತಾಂಜಲಿ**

**೩. ಉಪನಿಷತ್ ಗೀತಾಂಜಲಿ**

ಲೇಖಕರು ಮತ್ತು ಪ್ರಕಾಶಕರು: ಡಾ. ಮಡ್ವ ಶಾಮಭಟ್ಟ,
ಶ್ರೀ ಮಹಾದೇವ ಕ್ಲಿನಿಕ್,ಕುಂಬಳೆ-೬೭೧ ೩೨೧

## ಸೂಕ್ತ ಗೀತಾಂಜಲಿ

**೪೨ ಪುಟಗಳ ಪುಸ್ತಕ, ಬೆಲೆ ೧೫/-ರೂ.ಗಳು.**
**೧೯೯೯ರಲ್ಲಿ ದ್ವಿತೀಯ ಮುದ್ರಣ ಕಂಡಿದೆ.**

ಇದರಲ್ಲಿ, ಆಯ್ದ ಸಸ್ವರ ಮಂತ್ರಗಳ ಕನ್ನಡ ಪದ್ಯಾನುವಾದಗಳಿವೆ. ಕಾವ್ಯದಲ್ಲಿ ಇಂಪಾದ ಶಬ್ದಲಾಲಿತ್ಯವಿದೆ. ಲೇಖಕರೂ ಕೂಡ ಅಭಿಪ್ರಾಯಿಸಿರುವಂತೆ, ಅನುವಾದದಲ್ಲಿ ಭಾವಾರ್ಥಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಶ್ರದ್ಧಾದೇವಿ (ಕಾರ್ಯಸಿದ್ಧಿಗೆ), ಮೇಧಾದೇವಿ (ಬುದ್ಧಿಯ ಅಧಿದೇವತೆ), ವಾಗ್ದೇವಿ (ಮಾತು, ಯೋಚನೆ), ದುರ್ಗಾದೇವಿ (ಆದಿಶಕ್ತಿ) ಮುಂತಾದ ದೈವ ಶಕ್ತಿಗಳಿಗೆ ಸಂಬಂಧಿಸಿದ ಕೆಲವು 'ಸೂಕ್ತ'ಗಳ ಮೂಲ ವೈದಿಕ ಸಂಸ್ಕೃತ ಮಂತ್ರಗಳನ್ನು, ಆ ಮೂಲದಲ್ಲಿ ಓದಿ ಅರ್ಥಮಾಡಿಕೊಳ್ಳಲು ಅನುಕೂಲವಾಗುವ ರೀತಿಯಲ್ಲಿ ಅನುವಾದ ತುಂಬ ಸರಳವಾಗಿದೆ. ಡಾ. ಮಡ್ವ ಶಾಮಭಟ್ಟರ ಈ ಕನ್ನಡಾನುವಾದ ಕನ್ನಡಿಗರಿಗೆ ಹೆಚ್ಚು ಉಪಯುಕ್ತ.

## ವೇದಮಂತ್ರ ಗೀತಾಂಜಲಿ

**೬೮ ಪುಟಗಳ ಪುಸ್ತಕ, ಬೆಲೆ ೩೦/-ರೂ.ಗಳು.**
**೧೯೯೯ರಲ್ಲಿ ಮೂರನೆಯ ಬಾರಿ ಮುದ್ರಣಗೊಂಡಿದೆ.**

ಶ್ರೀರುದ್ರ, ಸರ್ವೋವೈರುದ್ರ, ಚಮಕ, ಪುರುಷಸೂಕ್ತ, ನಾರಾಯಣ ಸೂಕ್ತ, ದುರ್ಗಾಸೂಕ್ತ ಮತ್ತು ಶ್ರೀಸೂಕ್ತಗಳು ಇಲ್ಲಿ ಕನ್ನಡಾನುವಾದಗೊಂಡಿವೆ. ಶ್ರೀರುದ್ರ ಮಂತ್ರದಲ್ಲಿ ಹನ್ನೊಂದು ಅನುವಾಕಗಳಿವೆ. ಶ್ರೀರುದ್ರ ಪಠಿಸುವುದೆಂದರೆ ಧ್ಯಾನದಲ್ಲಿ ತುರೀಯಸ್ಥಿತಿಗೆ ಹೋಗಿ ಬಂದಂಥ ಅನುಭವ. ಯಾಗಗಳಲ್ಲೇ ಶ್ರೇಷ್ಠವಾದ ಸೋಮಯಾಗವನ್ನು ಮಾಡಲು ಬೇಕಾದ ಯಜ್ಞ ಸಾಮಗ್ರಿಗಳ ವಿವರಣೆ ಚಮಕಗೀತೆಯಲ್ಲಿದೆ. ಪುರುಷಸೂಕ್ತದಲ್ಲಿ ವಿಶ್ವದ ಜನನವನ್ನು ಬಹಳ ಅರ್ಥಗರ್ಭಿತವಾಗಿ ವರ್ಣಿಸಲಾಗಿದೆ. ನಾರಾಯಣಸೂಕ್ತವು ಸ್ವರ ಮಾಧುರ್ಯವುಳ್ಳ ಭಕ್ತಿ ಹುಟ್ಟಿಸುವ ಮಂತ್ರ. ದುರ್ಗಾಸೂಕ್ತದಲ್ಲಿ ಕಷ್ಟಗಳಿಂದ ಪಾರಾಗಲು ಪ್ರಾರ್ಥನೆಯಿದೆ. ಶ್ರೀಸೂಕ್ತದಲ್ಲಿ ಅಶುಭ ಮತ್ತು ಬಡತನವನ್ನು ಹೋಗಲಾಡಿಸುವಂತೆ ಪ್ರಾರ್ಥನಾ ಗೀತೆಯಿದೆ.

'ರುದ್ರಗೀತೆ ಮತ್ತು ಪುರುಷಸೂಕ್ತಗಳನ್ನು ಲೇಖಕರು ತುಂಬಾ ಶ್ರದ್ಧೆಯಿಂದ ಭಾಷಾಂತರಿಸಿದ್ದಾರೆ' ಎಂಬ ಕವಿ ಕಯ್ಯಾರ ಕಿಞ್ಞಣ್ಣರೈ ಅವರ ಅಭಿಪ್ರಾಯ ಅನುವಾದಿತ ಕೃತಿಯಲ್ಲಿ ಬಿಂಬಿತವಾಗಿದೆ.

## ಉಪನಿಷತ್ ಗೀತಾಂಜಲಿ

**೬೮ ಪುಟಗಳ ಪುಸ್ತಕ, ಬೆಲೆ ೩೦/-ರೂ.ಗಳು.**
**೧೯೯೮ರಲ್ಲಿ ಪ್ರಥಮ ಮುದ್ರಣವನ್ನು ಕಂಡಿದೆ.**

ಈ ಪುಸ್ತಕದಲ್ಲಿ ಗಾಯತ್ರೀ-ಸಾವಿತ್ರೀ-ಸರಸ್ವತೀ ಸ್ತುತಿಗಳು; ಈಶಾವಾಸ್ಯೋಪನಿಷತ್, ಕೇನೋಪನಿಷತ್, ಕಠೋಪನಿಷತ್ ಮತ್ತು ಪುಷ್ಪದಂತ ವಿರಚಿತ 'ಶಿವಮಹಿಮ್ನಃ ಸ್ತೋತ್ರಮ್'— ಇವು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟಿವೆ. ಸಂಸ್ಕೃತ ಭಾಷೆಯನ್ನು ತಿಳಿಯದ ಸಾಮಾನ್ಯ ಜನರೆಲ್ಲರಿಗೂ ಸುಲಭವಾಗಿ ಅರ್ಥವಾಗಬಹುದಾದ ರೀತಿಯಲ್ಲಿ ಈ ರಚನೆಗಳು ಮೂಡಿ ಬಂದಿವೆ. 'ಅಗೆದು ತೆಗೆದ ಉಪನಿಷತ್ತಿನ ಗನಿಯನ್ನು, ಕನ್ನಡದ ಕಣಜಕ್ಕೆ ತುಂಬುವ ಸತ್ಕಾರ್ಯ'ವನ್ನು ಡಾ. ಮಡ್ವ ಶಾಮಭಟ್ಟರು ಮಾಡಿರುವುದು ಸ್ತುತ್ಯಾರ್ಹ.

'ಜನರ ಸೇವೆಯೇ ಜನಾರ್ದನನ ಸೇವೆ' ಎಂದುಕೊಂಡು ವೃತ್ತಿಯಲ್ಲಿ ವೈದ್ಯರಾಗಿದ್ದ ಡಾ. ಶಾಮಭಟ್ಟರು, ಈಗ 'ಜನಾರ್ದನನ ಸೇವೆಯೂ ಜನರ ಸೇವೆಯೇ' ಎಂದುಕೊಂಡು ತಮ್ಮನ್ನು ಇವೆರಡರಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಇವರ ಮೇಲ್ಕಂಡ ಮೂರೂ ಕೃತಿಗಳು ಅಧ್ಯಾತ್ಮ ಚಿಂತಕರಿಗೆ, ಸಾಧನಾ ಕೇಂದ್ರಗಳವರಿಗೆ, ಕಾವ್ಯಾಸಕ್ತರಿಗೆ, ವೇದ-ಉಪನಿಷತ್ ಕಲಿಯುವ ವಟುಗಳಿಗೆ, ಕನ್ನಡದ ಭಕ್ತ ಜನರಿಗೆ ಹೆಚ್ಚು ಉಪಯುಕ್ತವಾಗಲೆಂದು ಆಶಿಸೋಣ.

—ಎ.ಪಿ.ಶ್ರೀಕಂಠರಾಜೇ ಅರಸ್, ಮೈಸೂರು.

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಏಪ್ರಿಲ್**

**12 ಶುಕ್ರವಾರ — ಶ್ರೀ ರಾಮನವಮಿ**

**21 ಶುಕ್ರವಾರ — ಆಧ್ಯಾತ್ಮಿಕ ಶಿಬಿರ**

**ಸಮಯ ಸಂಜೆ ೩.೦೦ – ೭.೦೦**

**ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ**